ಸಾಹಿತ್ಯಿಕ ಪತ್ರಿಕೆಗಳ ಸಂಪಾದಕರಾಗಿಯೂ ಕ್ರಿಯಾಶೀಲರು. ಕರ್ನಾಟಕದಿಂದ ಮುಂಬಯಿಗೆ ಬರುವ ಕಲಾವಿದರಿಗೆ, ಸಾಹಿತಿಗಳಿಗೆ, ಸಂಗೀತಗಾರರಿಗೆ, ನೃತ್ಯಪಟುಗಳಿಗೆ, ಕಲಾ ಸಂಘಟಕರಿಗೆ ಮುಂಬಯಿಯ ದೇವನಾರಿನಲ್ಲಿರುವ ನಿಂಜೂರರ ಮನೆ ಮನ ಸದಾ ತೆರೆದಿರುತ್ತದೆ.

ನಿಂಜೂರರ ವಿಶಿಷ್ಟ ಕಥನ ಶೈಲಿಯಲ್ಲಿ ಒಳ್ಳೆಯದರ ಜೊತೆಗೇ ಅನಪೇಕ್ಷಣೀಯ ಗುಣಗಳ ಮಿಶ್ರ ಪಾಕದ ಪಾತ್ರಗಳಿವೆ; ಎಷ್ಟೋ ಸಲ ಆ ಪಾತ್ರಗಳ ವರ್ತನೆಯ ಹಿಂದಿರುವ ಮನೋವೈಜ್ಞಾನಿಕ ಕಾರಣಗಳ ಶೋಧವೂ ಇದೆ. ಕರ್ನಾಟಕದ ಕರಾವಳಿಯ ಜನಸಂಸ್ಕೃತಿಯ ವಿವಿಧ ಸ್ತರಗಳ ಚಿತ್ರಣ ಅವರ ಬರವಣಿಗೆಯಲ್ಲಿ ದಟ್ಟವಾಗಿರುತ್ತದೆ. ಇದು ಕ್ರಮೇಣ ಅಳಿಸಿ ಹೋಗುತ್ತಿರುವ ಜೀವನಶೈಲಿಯ ಸಾಂಸ್ಕೃತಿಕ ಮತ್ತು ಚಾರಿತ್ರಿಕ ದಾಖಲಾತಿಯೂ ಹೌದು. ಭಾಷೆಯ ಬಳಕೆಯೂ ಸೇರಿದಂತೆ ಪ್ರಾದೇಶಿಕ ಸೊಗಡು ತುಂಬ ನೈಜ. 'ಅಸ್ರಾಯಘಟ್', 'ಕಸಲೆ ಬಿಸಲೆ', 'ಒಡುಸಂತಾನ', 'ಬಿಂಗ್ರಿ', 'ಅಂಗಲಾಪ', 'ಸೇಳೆ', 'ಪಿಸಾಂಟ್', 'ಪುಡ್ಗೊ', 'ರಂದುವುದು', 'ರಟ್ಟುವುದು' ಮೊದಲಾದ ತುಳು ಪ್ರಭಾವದ, ವಿರಳ ಆದರೆ ಆಕರ್ಷಕ ಎನಿಸುವ ಅನನ್ಯ ಪದ ಭಂಡಾರ ಅವರ ಬರವಣಿಗೆಯಲ್ಲಿದೆ. ಹಳ್ಳಿಗಳ ಶ್ರೀಸಾಮಾನ್ಯರ ಓರೆಕೋರೆ, ಸಣ್ಣತನ, ಮುಗ್ಧತೆ ಮತ್ತು ಅಲ್ಲಿಯ ವಾತಾವರಣದ ಸೃಷ್ಟಿ ಓದುಗರ ಮುಖದ ಮೇಲೆ ಮುಗುಳ್ನಗುವನ್ನು ತರದೇ ಇರದು. ನಿಂಜೂರರ ಸಾಹಿತ್ಯದಲ್ಲಿ ಗಟ್ಟಿತನದ ಸ್ತ್ರೀಪಾತ್ರಗಳೆಲ್ಲಿ ಎಂದು ಹುಡುಕಹೊರಡುವ ಚಿಕಿತ್ಸಕ ದೃಷ್ಟಿಗೆ ಎದುರಾಗುತ್ತಾರೆ ಸಾಂಪ್ರದಾಯಿಕ ರೀತಿಯಲ್ಲಿ 'ನಾಯಕಿ' ಎಂದೆನಿಸಿಕೊಳ್ಳದೆ ಹೋಗಬಹುದಾದ 'ಸಣ್ಣಮ್ಮ' ಅಥವಾ 'ಬರಿದು' ಕತೆಯ ಕಾವೇರಿ. ಲೇಖಕರು ಅಪಾರ ಹೃದಯವಂತಿಕೆಯಿಂದ ಸೃಷ್ಟಿಸಿದ ಇಂತಹ ಪಾತ್ರಗಳು ಬಾಳಿನ ಅಸಹಾಯಕತೆಗೆ ಬೊಟ್ಟು ಮಾಡುತ್ತ ಓದುಗರಿಗೆ ಅರಿವಾಗದಂತೆ ಅವರ ಮನಸ್ಸನ್ನು ಆರ್ದ್ರಗೊಳಿಸುತ್ತವೆ. ವಿಶಿಷ್ಟ ಸಾಹಿತ್ಯವನ್ನು ಕನ್ನಡ ಓದುಗರಿಗೆ ಕೊಟ್ಟ ವ್ಯಾಸರಾವ್ ನಿಂಜೂರರೊಂದಿಗೆ ನಡೆಸಿದ ಸಾಹಿತ್ಯ ಸಲ್ಲಾಪ ಇಲ್ಲಿದೆ.

◆ **ಅದ್ಭುತ ಪಾತ್ರ ಚಿತ್ರಣ ನಿಮ್ಮ ಕತೆ ಕಾದಂಬರಿಗಳ ವೈಶಿಷ್ಟ್ಯಗಳಲ್ಲಿ ಒಂದು. 'ತೆಂಕನಿಡಿಯೂರಿನಲ್ಲಿ' ಸಾಕಷ್ಟು ಅಭಿಮಾನಿಗಳನ್ನು ಗೆದ್ದ ಕುಳುವಾರಿ ಎಂದರೆ 'ಜಿಲ್ಲ ನಾಯ್ಕ'. ಬೇಡದ ಉಪದ್ವ್ಯಾಪಗಳನ್ನು ಮೈಮೇಲೆ ಎಳೆದುಕೊಂಡು ಉಸ್ಸಪ್ಪ ಎಂದು ಹೆಣಗಾಡುವ ನಸ್ರಾಣಿಗಳ ನಡುವೆ ಬಿಸಾತ್ ಇಲ್ಲದಂತೆ ಇದ್ದು ಬಿಡುವ ಜಿಲ್ಲ ನಿಮ್ಮ ಕಲ್ಪನಾ ಭಿತ್ತಿಯಲ್ಲಿ ಹುಟ್ಟಿ ಬೆಳೆದದ್ದು ಹೇಗೆ? ಜಿಲ್ಲನ ನೆಪದಲ್ಲಿ, ಕೇವಲ ಕಪ್ಪು ಬಿಳುಪು ಅಲ್ಲದೆ ಹಲವು ಛಾಯೆಗಳಿರುವ ಪಾತ್ರಗಳ ಸೃಷ್ಟಿಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವಿರಾ?**

ಜಿಲ್ಲ ನಾಯ್ಕ ನಾನು ಊರಿನಲ್ಲಿ ಕಂಡ ಜೀವಂತ ಪಾತ್ರ. ಇವನಿಗೆ ಕಸೆ ತೊಡಿಸಿ, ಕೇದಗೆ ಮುಂದಲೆ ಇರಿಸಿ, ಭುಜಕೀರ್ತಿ, ಎದೆಕವಚ, ಕೈಗಳಾಭರಣ, ಕಾಲು ಕಡಗದೊಂದಿಗೆ ಗೆಜ್ಜೆಕಟ್ಟಿ ರಂಗಸ್ಥಳಕ್ಕೆ ವೇಷಧಾರಿಯಾಗಿ ಕಳಿಸಿದವನು ನಾನು. ಆತನಿಗೂ ಯಕ್ಷಗಾನ, ಮಹಾಭಾರತ, ರಾಮಾಯಣಗಳು ಪ್ರಿಯವೇ. ಆದರೆ ಒಂದೇ ಅಮಿತ ಜೀವನೋತ್ಸಾಹ ಇಲ್ಲವಾದರೆ ಆತನಿಗೆ ಪ್ರಿಯವಾದ ಹೊಟ್ಟೆಯೊಳಗಿಳಿಸುವ ಪರಮಾತ್ಮನ ದೆಸೆಯಿಂದ ಅವನ ಮಾತುಗಳಲ್ಲಿ ಕೆಲವೊಮ್ಮೆ ಅವನಿಗೆ 'ಸ್ವಯ' ಇರುವುದಿಲ್ಲ. ಆದರೆ ಈತ ಅದ್ಭುತ ಮಾನವೀಯ ಗುಣವುಳ್ಳ ವ್ಯಕ್ತಿಯಾಗಿ ನನ್ನನ್ನು ಕಾಡಿದ್ದಾನೆ. ನಾನು ಬರೆದುದಕ್ಕಿಂತಲೂ ಒಂದು ಮಂಜೊಟ್ಟಿ ತೂಕದಷ್ಟಾದರೂ ಆತನೇ ನನ್ನಿಂದ ಬರೆಸಿದ್ದಾನೆ. ಅಂತೂ ನನ್ನ 'ತೆಂಕನಿಡಿಯೂರಿನ ಕುಳುವಾರಿಗಳು' ಕಾದಂಬರಿಯಲ್ಲಿ ಆತನೊಬ್ಬ ಪ್ರಮುಖ ಕುಳುವಾರಿ.

ನಾನು ಮುಂಬಯಿಯಲ್ಲಿ ಬಹುಕಾಲದಿಂದ ಇರುವೆನಾದರೂ ನನಗೆ ಹುಟ್ಟೂರಿನ ಸೆಳೆತದಿಂದ